

# ಗ್ಯಾಂಗ್‌ಸ್ಟರ್ ಚಿತ್ರದಲ್ಲಿ ವಸಿಷ್ಠ ಸಿಂಹ

‘ಲವ್ಲಿ’ ಸಿನಿಮಾ ನಂತರ ಚಿಕ್ಕ ಬ್ರೇಕ್ ಪಡೆದುಕೊಂಡಿದ್ದ ನಟ ವಸಿಷ್ಠ ಸಿಂಹ, ಮತ್ತೆ ಸಿನಿಮಾಗೆ ಮರಳಿದ್ದಾರೆ.

ಸ್ಕ್ರೀನ್ ಪ್ರೆಸೆನ್ಸ್, ಪಾತ್ರಗಳ ಆಯ್ಕೆ, ತಮ್ಮದೇ ವಿಶಿಷ್ಟ ಮ್ಯಾನರಿಸಂನಿಂದ ಗುರುತಿಸಿಕೊಂಡಿರುವ ಅವರು, ಕರ್ನಾಟಕ ಕರಾವಳಿ ತೀರದ ಗ್ಯಾಂಗ್‌ಸ್ಟರ್ ಸಿನಿಮಾದಲ್ಲಿ ಕಾಣಿಸಿಕೊಳ್ಳಲು ರೆಡಿ ಆಗುತ್ತಿದ್ದಾರೆ.

ಸಿನಿಮಾಗೆ ಇನ್ನೂ ಶೀರ್ಷಿಕೆಯಿಡಬೇಕಿದ್ದು, ‘ಆ್ಯಪಲ್ ಕೇಕ್’, ‘ಕಾಗದ’ ಸಿನಿಮಾ ನಿರ್ದೇಶಿಸಿದ್ದ ರಂಜಿತ್ ಕುಮಾರ್ ಗೌಡ ಈ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಮಂಗಳೂರಿನ ಗ್ಯಾಂಗ್‌ಸ್ಟರ್ ಕಥಾಲೋಕವನ್ನು ತೆರೆ ಮೇಲೆ ತರುವ ಪ್ರಯತ್ನದಲ್ಲಿದ್ದಾರೆ.

‘ಕರಾವಳಿ ತೀರದ ಈ ಗ್ಯಾಂಗ್‌ಸ್ಟರ್ ಕಥೆಯಲ್ಲಿ ಭಾವನೆ, ರಾಜಕೀಯ ಎಲ್ಲವೂ ಇದೆ. ಈ ಕಥೆಯನ್ನು ಹೇಳುತ್ತಿದ್ದಂತೆ ವಸಿಷ್ಠ ತಕ್ಷಣವೇ ಒಪ್ಪಿದರು’ ಎಂದು ರಂಜಿತ್ ಹೇಳಿದ್ದಾರೆ.

ಮಂಗಳೂರು, ಸುರತ್ಕಲ್, ಉಡುಪಿ ಭಾಗಗಳಲ್ಲಿ ಚಿತ್ರೀಕರಣ ನಡೆಸಲು ಯೋಜಿಸಲಾಗಿದೆ. ಕರಾವಳಿಯ ಸಾಮಾಜಿಕ, ರಾಜಕೀಯ ವಾತಾವರಣ ಸಿನಿಮಾದಲ್ಲಿ ಮೇಳೈಸಲಿರುವ ನಿರೀಕ್ಷೆಯಿದೆ.

ಯಶ್ ಶೆಟ್ಟಿ, ರವಿಶಂಕರ್, ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ರಾಜಾ ಬೆಳವಾಡಿ ಅವರು ಮುಖ್ಯ ಭೂಮಿಕೆಯಲ್ಲಿರುವುದು ಸಿನಿಮಾದ ಹೈಲೈಟ್ ಆಗಿದೆ. ನಟಿ ಸುಷ್ಮಿತಾ ಭಟ್, ವಸಿಷ್ಠಗೆ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

# ತೀವ್ರತೆಯ ಪಾತ್ರಕ್ಕೆ ಹಂಬಲಿಸುವೆ: ಚೈತ್ರಾ

‘ನನಗೆ ಮೊದಲು ಸಿನಿಮಾ ಸ್ಕ್ರಿಪ್ಟ್ ಇಷ್ಟವಾಗಬೇಕು. ಆನಂತರ ಬಜೆಟ್ ವಿಷಯ. ಉತ್ತಮವಾದ, ಗುಣಮಟ್ಟದ ಕಥೆಯ ಬಗ್ಗೆ, ಜನರ ಮನಸ್ಸಿನಲ್ಲಿ ಉಳಿಯುವಂಥ ಪಾತ್ರಗಳ ಬಗ್ಗೆ ನನ್ನಲ್ಲಿ ತೀರದ ಹಸಿವಿದೆ. ನನ್ನ ಜೀವನದಲ್ಲಿ ಸೂಕ್ತ ಸಮಯದಲ್ಲಿ ಒಳ್ಳೆಯ ಪ್ರಾಜೆಕ್ಟ್‌ಗಳ ಭಾಗವಾಗಬೇಕು ಎಂಬುದಷ್ಟೇ ನನ್ನ ಗುರಿ. ನನಗೆ ಸಿಗುವ ಪಾತ್ರಗಳೊಂದಿಗೆ, ನನ್ನ ವಯಸ್ಸು ಹಾಗೂ ಅನುಭವಗಳೊಂದಿಗೆ ನಾನು ಬೆಳೆಯುತ್ತಲೇ ಸಾಗಬೇಕೆಂದು ಬಯಸುತ್ತೇನೆ’ ಎಂದಿದ್ದಾರೆ ನಟಿ ಚೈತ್ರಾ ಜೆ. ಆಚಾರ್.

‘ಮಾರ್ನಮಿ’ ಸಿನಿಮಾದಲ್ಲಿ ಈಚೆಗೆ ಕಾಣಿಸಿಕೊಂಡಿರುವ ಚೈತ್ರಾ, ಈ ನಡುವೆಯೇ ಕಿರುಚಿತ್ರವೊಂದಕ್ಕೆ ರೆಡಿಯಾಗಿದ್ದಾರೆ. ತಮ್ಮ ಮುಂದೆ ಹಲವು ಕಥೆಗಳು ಬರುತ್ತಿದ್ದು, ಬೇರೆ ಬೇರೆ ಶೇಡ್‌ಗಳ ಪಾತ್ರಗಳನ್ನು ನಿಭಾಯಿಸುತ್ತಿರುವ ತೃಪ್ತಿಯಲ್ಲಿದ್ದಾರೆ.

‘ನಿರ್ದೇಶಕರು ಉತ್ತಮ ಪಾತ್ರಗಳೊಂದಿಗೆ ನನ್ನತ್ತ ಬರುತ್ತಿದ್ದಾರೆ. ನನ್ನನ್ನು ಅಪ್ರೋಚ್ ಮಾಡುವ ಮುನ್ನ ಯೋಚಿಸಿಕೊಂಡೇ ಬರುತ್ತಿರುವುದು ಒಳ್ಳೆಯ ಸಂಗತಿ. ನನ್ನ ಬಳಿಗೆ ಬರುವ ಬಹುಪಾಲು ಪಾತ್ರಗಳು ತೀವ್ರತೆಯಿರುವ, ಬಹು ಪದರವಿರುವ ಪಾತ್ರಗಳಾಗಿರುತ್ತವೆ. ನಮಗಾಗಿಯೇ ಪಾತ್ರಗಳನ್ನು ರಚಿಸುತ್ತಾರೆ ಎಂಬುದು ಬಹಳ ಭಾವುಕರನ್ನಾಗಿಸುತ್ತದೆ. ಅದು ನಮ್ಮ ಕೆಲಸದ, ಶ್ರಮದ ಪ್ರತಿಫಲ. ಹೀಗೆ ಪಾತ್ರ ಸೃಷ್ಟಿಸುವುದು ಪ್ರಶಸ್ತಿಗಳಿಗಿಂತ ಹೆಚ್ಚು. ಇದು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ’ ಎಂದು ಸಂತಸ ಹಂಚಿಕೊಂಡಿದ್ದಾರೆ.

‘ಮಾರ್ನಮಿ’ ಸಿನಿಮಾದಲ್ಲಿ ದೀಕ್ಷಾ ಪಾತ್ರವನ್ನು ಬಹಳ ಪ್ರೀತಿಯಿಂದ ಒಪ್ಪಲೂ ಇದೇ ಕಾರಣ ಎಂದಿದ್ದಾರೆ.

‘ಮಹಿಳೆಯನ್ನು ಸಿನಿಮಾದಲ್ಲಿ ದೇವಿಯ ರೀತಿ ತೋರಿಸುತ್ತೇವೆ ಅಥವಾ ಸಂತ್ರಸ್ತೆಯ ರೂಪದಲ್ಲಿ ಬಿಂಬಿಸುತ್ತೇವೆ. ಆದರೆ ವಾಸ್ತವವಾಗಿ ಮಹಿಳೆಯರು ಹೀಗಿರುವುದಿಲ್ಲ’ ಎಂದು ಹೇಳುವ ಅವರಿಗೆ, ಮಹಿಳೆಯರ ನಿಜ ಜೀವನದ ಕಥೆಗಳಲ್ಲಿ ಪಾತ್ರವಾಗುವ ಹಂಬಲ.

‘ಒಂದು ಸಮಯದಲ್ಲಿ ಒಂದೇ ಕೆಲಸವನ್ನು ಮಾಡುತ್ತೇನೆ. ನಾನು ಆರಿಸಿಕೊಳ್ಳುವ ಸ್ಕ್ರಿಪ್ಟ್‌ಗಳ ಕುರಿತು ನಿಗಾವಹಿಸಿ ಅದರ ಮೇಲೆ ಗಮನ ನೀಡುತ್ತೇನೆ. ಕೆಲವೊಮ್ಮೆ ಬಜೆಟ್, ಕೆಲವೊಮ್ಮೆ ಸ್ಕ್ರಿಪ್ಟ್, ಕೆಲವೊಮ್ಮೆ ಎರಡೂ ಇರುತ್ತದೆ. ಇದರ ನಡುವಣ ಸಮತೋಲನ ಬಹಳ ಮುಖ್ಯ’ ಎನ್ನುವ ಅವರು ಭಿನ್ನ ಧಾಟಿಯಲ್ಲಿ ತಮ್ಮನ್ನು ಪ್ರಸ್ತುತಪಡಿಸಿಕೊಳ್ಳುವ ಪ್ರಯತ್ನ ಮುಂದುವರೆಸಿದ್ದಾರೆ.

